[Govt. of Karnataka C.R.P. 67]

| Deposition Sheets (RP.No.57) Form No.4 (Civil) | **IN THE COURT OF CIVIL JUDGE & J.M.F.C., KARKALA.** <br><br> **Criminal Case No. 247/2022** |
| --- | --- |

**...................................................Vs....................................**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 5

ಸಾಕ್ಷಿದಾರನ ಹೆಸರು : ಮಂಜುನಾಥ್

ತಂದೆಯ ಹೆಸರು : ವಿಷ್ಣು ಮೂರ್ತಿ ಅಡಿಗ

ಪ್ರಾಯ : 45 ವರ್ಷ

ಉದ್ಯೋಗ : ಮುಖ್ಯ ಪೇದೆ , ಶಿರ್ವ ಠಾಣೆ

ವಾಸ : ಶಿರ್ವ

ದಿನಾಂಕ 15.05.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2015 ರಿಂದ 2022 ರವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 03.02.2021 ರಂದು ಬೆಳಿಗ್ಗೆ 8.00 ಗಂಟೆಗೆ ಠಾಣೆಯಲ್ಲಿರುವಾಗ ಚಾಸಾ-1 ರವರು ನನ್ನನ್ನು ಹಾಗೂ ಚಾಸಾ-4 , ಚಾಸಾ-6 , 7 ರವರನ್ನು ಕರೆದು ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಎಂಬಲ್ಲಿ ದನದ ಮಾಂಸವನ್ನುಮಾರಾಟ ಮಾಡುವ ಬಾತ್ಮಿ ಬಂದಿರುತ್ತದೆ. ನಾವು ಅಲ್ಲಿಗೆ ಹೋಗಬೇಕೆಂದು ಇಲಾಖಾ ವಾಹನ ಕೆಎ-20-ಜಿ -162 ವಾಹನದಲ್ಲಿ ಚಾಲಕ ಚಾಸಾ-8 ರವರ ಜೊತೆಗೆ ಠಾಣೆಯಿಂದ ಹೊರಟು 8.30 ಗಂಟೆಗೆ ತೆಳ್ಳಾರು ತಲುಪಿರುತ್ತೇವೆ. ಸ್ಥಳದಲ್ಲಿ ಬಾತ್ಮಿದಾರರು ಇದ್ದು ರಸ್ತೆ ಪಕ್ಕದಲ್ಲಿರುವ ಮನೆಯನ್ನು ತೋರಿಸಿ ಅವರು ಹೊರಟುಹೋಗಿರುತ್ತಾರೆ.

ನಂತರ ಚಾಸಾ-1 ರವರು ಪಂಚಾರಾದ ಚಾಸಾ-2 ಮತ್ತು 3 ರವರನ್ನು ಸ್ಥಳಕ್ಕೆ ಕರೆಸಿಕೊಂಡ ಬಾತ್ಮಿದಾರರು ತಿಳಿಸಿದ ಮನೆಗೆ ಹೋದಾಗ ಇಬ್ಬರು ಮನೆಯ ಹಿಂಬದಿಯ ಹಾಡಿಯಲ್ಲಿ ಓಡಿಹೋಗಿದ್ದು ಮನೆಯಲ್ಲಿರುವ ಹೆಂಗಸರನ್ನು ವಿಚಾರಿಸಿದ್ದು ಅವರು ಹೆಸರು ಅಸ್ಯಾ  ಬಾನು ಚಾಸಾ-9 ಎಂದು ತಿಳಿಸಿರುತ್ತಾರೆ. ಓಡಿ ಹೋದವ ವ್ಯಕ್ತಿಗಳ ಬಗ್ಗೆ ವಿಚಾರಿಸಿದಾಗ ತನ್ನ ಗಂಡ 1 ನೇ ಆರೋಪಿ ಸಯ್ಯದ್ ಜಲೀಲ್ ಮತ್ತು ಅವರ ಮಗ 2 ನೇ ಆರೋಪಿ ಅಫ್ರೀದ್ ಎಂದು ತಿಳಿಸಿರುತ್ತಾರೆ. ಅವರ ಸ್ವಂತ ಲಾಭಕ್ಕಾಗಿ ಎಲ್ಲಿಂದಲೊ ದನವನ್ನು ತಂದು ಮಾಂಸ ಮಾಡಿ ಪ್ಲಾಸ್ಟಿಕ್ ತೊಟ್ಟೆಯಲ್ಲಿ  ಹಾಕಿ ಮನೆಯ ಹಿಂಬದಿಯ ಸ್ನಾನದ ಕೋಣೆಯಲ್ಲಿ ಇಟ್ಟಿದ್ದು , ಪೊಲೀಸರನ್ನು ನೋಡಿ ಓಡಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ದನದ ಮಾಂಸ ಇರುವ ಬಕೆಟ್ ಗಳನ್ನು ತೋರಿಸಿರುತ್ತಾರೆ.

ನಂತರ ಚಾಸಾ-1 ರವರು ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಗೊಳ್ಳಲು ಪ್ರಥಮ ವರ್ತಮಾನ ವರದಿಯ ದಾಖಲಿಸಲು ಮುಂದಿನ ಪ್ರಕರಣದ ತನಿಖೆಗಾಗಿ ಕಡತವನ್ನು ಕಳುಹಿಸಿಕೊಡುವಂತೆ ಹೆಚ್ ಸಿ 820 ಅರುಣಾನಂದ  ರವರಿಗೆ ಸೂಚಿಸಿ ಚಾಸಾ-7 ರವರೊಂದಿಗೆ  ಬೆಳಿಗ್ಗೆ 9.00 ಗಂಟೆಗೆ ಪಿರ್ಯಾದನ್ನು  ಕಳುಹಿಸಿಕೊಟ್ಟಿರುತ್ತಾರೆ. ಮಹಜರು ಮುಖಾಂತರ 2 ಬಕೆಟ್ ಗಳನ್ನು ಹಾಗೂ ಮಾಂಸದ ತುಂಡುಗಳನ್ನು ಮಾಡಲು ಉಪಯೋಗಿಸುವ ಮರದ ತುಂಡುಗಳನ್ನು ಹಾಗೂ ಮರದ ಹಿಡಿ ಇರುವ ಕತ್ತಿ -1 , ಪ್ಲಾಸ್ಟಿಕ್   ಕೈ ಚೀಲ, ವಶಪಡಿಸಿಕೊಂಡು ಮಹಜರಿಗೆ ಸಹಿ ಹಾಕಿರುತ್ತೇನೆ.  ಈಗ ನಾನು ನೋಡಿದ ನಿಪಿ-2 ತಕ್ಷೀರು ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರಿನಲ್ಲಿ ನನ್ನ ಸಹಿ ಇದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.  ಸ್ವಾ ಧೀನಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸಬಹುದು. ನ್ಯಾಯಾಲಯದ ಮುಂದೆ ಇರುವ ಮು ಮಾ-1 ರಿಂದ 4 ನ್ನು ನೋಡಿ ಗುರುತಿಸಿದ್ದೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ ನ್ಯಾಯಾಲಯದ ಮುಂದೆ ಆರೋಪಿಯು ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ  ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ ಎ ಕೆ ಎಂ ವಕೀಲರು ಎ ಎಸ್ ಎಂ ಪರವಾಗಿ ಪಾಟಿ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶವನ್ನು ರೂ.500/- ಖರ್ಚನ್ನು ನೀಡಲು ಆದೇಶಿಸಿ ಪಾಟೀ ಸವವಾಲು ಮುಂದೂಡಲಾಯಿತು.
ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ